CC 131/2015
CW-4 PW -2

## ಮೂರನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಕನಕಪುರ

## ಸಿ.ಸಿ ನಂ. 131/2015

ದಿನಾಂಕಃ**.24.12.2025** ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

| ಚಾಸಾ-**4** | ಪ್ರಾಸಾ-**2** |
|---|---|
| ಹೆಸರು | - ರವಿಕುಮಾರ್ |
| ತಂದೆ / ಗಂಡನ ಹೆಸರು | - ನಂಜುಂಡ ಸ್ವಾಮಿ |
| ವಯಸ್ಸು | - **48** |
| ಉದ್ಯೋಗ | - ಹಾರೋಹಳ್ಳಿ ಪೊ.ಠಾಣೆಯಲ್ಲಿ ಚಾಲಕ |
| ವಿಳಾಸ | - ಹಾರೋಹಳ್ಳಿ |

**ಮುಖ್ಯವಿಚಾರಣೆ : ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರಿಂದಃ-**

**2013-2015** ರವರೆಗೆ ನಾನು ಸಾತನೂರು ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

**24.03.2014** ರಂದು ನಾನು ಮತ್ತು ಚಾಸಾ-**1** ರವರು ವಾಹನ ಸಂಃ ಕೆಎ-**42-**ಜಿ-**74** ವಾಹನದಲ್ಲಿ ಗಸ್ತು ಕರ್ತವ್ಯದಲ್ಲಿ ಚಾಸಾ-**1** ರವರು ಒಂದು ಕಡೆ ನಿಲ್ಲಿಸಲು ಹೇಳಿದರು ಆಗ ಅಲ್ಲಿಗೆ ಇತರೆ ಪೊಲೀಸ್ ಸಿಬ್ಬಂದಿ ಮತ್ತು ಪಂಚರು ಅಲ್ಲಿಂದ ನಾವೆಲ್ಲಾರು ಹೊಂಗಾಣಿ ದೊಡ್ಡಿಗೆ ಹೋಗೋಣ ಎಂದು ಚಾಸಾ-**1** ರವರು ಹೇಳಿದರು. ಅವರು ಹೇಳಿದಂತೆ ಒಂದು ಅಂಗಡಿಯ ಮುಂದೆ ವಾಹನ ನಿಲ್ಲಿಸಿದೆ. ಆಗ ಒಬ್ಬ ವ್ಯಕ್ತಿ ಅಂಗಡಿಯಿಂದ ಓಡಿ ಹೋದ. ಅಂಗಡಿಯಿಂದ ಸಿಬ್ಬಂದಿಯವರು **hey wards 180** ಎಂ ಎಲ್ **30** ಪಾಕೆಟ್ ಗಳು ಪಾಕೆಟ್ ತೆಗೆದುಕೊಂಡು ಬಂದರು. ಸದರಿ ಮದ್ಯದ ಪಾಕೆಟ್ಗಳನ್ನು ಪಂಚರಾದ ಚಾಸಾ-**5** ರಿಂದ **7** ರವರ ಸಮಕ್ಷಮ ಜಪ್ತು ಪಡಿಸಿಕೊಂಡರು. ನಂತರ ಜೀಪಿನಲ್ಲಿ ಠಾಣೆಗೆ ಬಂದರು.

ಸಾಕ್ಷಿ ಪಂಚನಾಮೆಯನ್ನು ನೋಡಿ ಅದರಲ್ಲಿರುವ ಒಂದು ಸಹಿಯನ್ನು ನೋಡಿ ತನ್ನ ಸಹಿ ಮತ್ತು ಸದರಿ ಪಂಚನಾಮೆ ಎಂದು ಗುರುತಿಸಿದ್ದು, ಸದರಿ **ಪಂಚನಾಮೆಯನ್ನು** ಈಗಾಗಲೇ ನಿಪಿ-**1** ಎಂದು ಗುರುತಿಸಿದ್ದು , ಸಾಕ್ಷಿ ಸಹಿಯನ್ನು ನಿಪಿ-**1(**ಬಿ**)** ಎಂದು ಗುರುತಿಸಲಾಯಿತು.

ಜಪ್ತು ಪಡಿಸಿಕೊಂಡ ಮುದ್ದೆಮಾಲನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನಾಯಾಲಯದ ಮುಂದೆ ಇರುವ ಒಂದು ಟೆಟ್ರಾ ಪಾಕೆಟ್ ನ್ನು ನೋಡಿ ಅದನ್ನು ಗುರುತಿಸಿದ್ದು ಅದನ್ನು ಈಗಾಗಲೆ ಎಂ.ಒ-**1** ಎಂದು ಗುರುತಿಸಲಾಗಿದೆ.

ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ, ಅವನು ಇಂದು ನ್ಯಾಯಾಲಯದಲ್ಲಿ ಹಾಜರಿದ್ದಾನೆ. ಘಟನೆ ಬಗ್ಗೆ ನಾನು ತನಿಖಾಧಿಕಾರಿಗೆ ಹೇಳಿಕೆ ಕೊಟ್ಟಿದ್ದೇನೆ.

(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ದವಾಗಿ ಸಾಕ್ಷ್ಯ ನುಡಿದಿರುವುದರಿಂದ ಅವರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರು ರವರು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)

<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-</u>

ನಿಪಿ-**1** ಪಂಚನಾಮೆಯನ್ನು ಸಂಜೆ **4.30-5.30** ರವರೆಗೆ ಮಾಡಿದೆವು ಎಂದರೆ ಸರಿ.

**<u>ಪಾಟೀ ಸವಾಲು: ಆರೋಪಿ ಪರ ಶ್ರೀ. ಕೆಎಂಜಿ ವಕೀಲರಿಂದಃ</u>**

ಚಾಸಾ-1 ರವರಿಗೆ ಮಧ್ಯಾಹ್ನ 2.30 ಗಂಟೆಗೆ ಮಾಹಿತಿ ಬಂತು. ಆಗ ನಾನು ಮತುತ ಚಾಸಾ-1 ರವರು ನಲ್ಲ ಹಳ್ಳಿಯಲ್ಲಿ ಗಸ್ತು ಕರ್ತವ್ಯದಲ್ಲಿ ಇದ್ದೆವು. ಮಧ್ಯಾಹ್ನ 3.00 ಗಂಟೆಗೆ ಎಡಮಾರನಹಳ್ಳಿ ಗ್ರಾಮಕ್ಕೆ ಹೋಗಿದ್ದೆವು. ಸ್ಥಳಕ್ಕೆ ನಾನು, ಚಾಸಾ-1 ಮತ್ತು ಇನ್ನು ಇಬ್ಬರು ಸಿಬ್ಬಂದಿ ಹೋಗಿದ್ದೆವು. ಎಡಮಾರನಹಳ್ಳಿಯಲ್ಲಿ 3.30 ಗಂಟೆ ಕೆಲಸ ಮುಗಿತು. ಆಗ ನನ್ನೊಂದಿಗೆ ಚಾಸಾ-2 ರವರು ಬಂದಿದ್ದರು. ನಮ್ಮ ಜೀಪಿನಲ್ಲಿ ಪಂಚರು ಯಾರು ಬರಲಿಲ್ಲ .ಚಾಸಾ-5 ರಿಂದ 7 ರವರು ಹೊಂಗಾಣಿ ದೊಡ್ಡಿ ಗ್ರಾಮದಲ್ಲಿ ಇದ್ದರು. ಚಾಸಾ-1 ರವರು ಏನು ಬರೆದಿದ್ದಾರೆ ಎಂದು ಗೊತ್ತಿಲ್ಲ. ಯಾರು ಸಹಿ ಮಾಡಿದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಚಾಸಾ-5 ರಿಂದ 7 ರವರು ಸಹಿ ಮಾಡಿದಾಗ ನಾನು ಅಲ್ಲೆ ಇದ್ದೆ. ಇದು ಇಂತವರದ್ದೆ ಮನೆ ಎಂದು ನನಗೆ ಗೊತ್ತಿರಲಿಲ್ಲ ಚಾಸಾ-1 ರವರು ಹೇಳಿದಂತೆ ನಾನು ಗಾಡಿಯನ್ನು ನಿಲ್ಲಿಸಿದೆ. ಮನೆಯಲ್ಲಿ ಯಾರು ವಾಸವಾಗಿದ್ದಾರೆ ಎಂದು ನಾನು ವಿಚಾರ ಮಾಡಿರುವುದಿಲ್ಲ ಅದು ನನ್ನ ಕೆಲಸ

ಅಲ್ಲ. ಅದೇ ದಿನ ನನ್ನ ಹೇಳಿಕೆಯನ್ನು ಸಂಜೆ 5.30 ಗಂಟೆಯಲ್ಲಿ ಚಾಸಾ-1 ರವರು ಪಡೆದುಕೊಂಡರು. ನಾನು ಯಾವುದೇ ದಾಳಿಯಲ್ಲಿ ಭಾಗವಹಿಸಿರುವುದಿಲ್ಲ, ಪಂಚನಾಮೆಯಲ್ಲಿ ಭಾಗಿಯಾಗಿರುವುದಿಲ್ಲ, ಆದರೂ ರಾಜಕಾರಣಿ ಮಾತು ಕೇಳಿ ಆರೋಪಿ ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ-5 ರಿಂದ 7 ರವರನ್ನು ಜೀಪಿನಲ್ಲಿ ಕರೆದುಕೊಂಡು ಬಂದಿದ್ದೆವು ಎಂದು ನಾನು ಹೇಳಿಕೆ ಕೊಟ್ಟಿರುವುದಿಲ್ಲ. ಸ್ಥಳದಲ್ಲಿ ಯಾವುದೇ ಪಂಚನಾಮೆ ಮಾಡಿರುವುದಿಲ್ಲ ಪೊ.ಠಾಣೆಯಲ್ಲಿ ಮಾಡಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ಸಾಕ್ಷಿಗೆ ದಿಃ **24.03.2014** ರಂದು ಅವನು ಪೊಲೀಸರಿಗೆ ನೀಡಿದ ಎಂಬ ಹೇಳಿಕೆಯ ಭಾಗವಾದ "ನಾನು ಕೆಎ-**42**-ಜಿ-**74** ಜೀಪ್ ನಲ್ಲಿ ಸಾಹೇಬರನ್ನು ಕರೆದುಕೊಂಡು ದೊಡ್ಡಾಲಹಳ್ಳಿ ವೃತ್ತಕ್ಕೆ ಬಂದಾಗ ನಂಜೇಗೌಡರ ಮಗ ನಂಜೇಶ್ ಮೋಟೇಗೌಡರ ಮಗ ಎಂ ಶಿವಣ್ಣ ಮತ್ತು ಚಿಕ್ಕೈದಯ್ಯ ರವರ ಮಗ ಮರಿಯಪ್ಪ ರವರುಗಳನ್ನು ಸಿಬ್ಬಂದಿಗಳಾದ ಪಿಸಿ **160, 162** ರವರು ಹಾಜರಿದ್ದು ಅವರಿಗೆ ವಿಷಯ ತಿಳಿಸಿ ಜೀಪಿನಲ್ಲಿ ಕೂರಿಸಿಕೊಂಡು ಮದ್ಯಾಹ್ನ **4.00** ಗಂಟೆಗೆ ದೊಡ್ಡಾಲಹಳ್ಳಿ ವೃತ್ತಕ್ಕೆ ಬಿಟ್ಟು ಹೋಂಗಾಣಿ ದೊಡ್ಡಿ ಗ್ರಾಮದ ಕರಿಸಿದ್ದೇಗೌಡ ಬಿನ್ ಕರಿಗೌಡ ರವರ ಮನೆ ಮುಂದೆ ಜೀಪನ್ನು ನಿಲ್ಲಿಸಲು ", ಓದಿ ಹೇಳಿದಾಗ ಅಲ್ಲಗಳೆದಿದ್ದರಿಂದ ಸದರಿ ಹೇಳಿಕೆ ಭಾಗವನ್ನು **ನಿಡಿ-1** ಎಂದು ಗುರುತಿಸಲಾಯಿತು.

ಮರುವಿಚಾರಣೆ ಇಲ್ಲ.

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ಧೃಢೀಕರಿಸುತ್ತೇನೆ)

ಓದಿ ಹೇಳಿ ಕೇಳಿ ಸರಿ ಇದೆ,

**ಮೂರನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ., ಕನಕಪುರ.**